**DEPARTMENTAL TESTS – JULY, 2024**

**[Translation from Kannada to Malayalam]**

[Time : 45 Minutes

(Maximum : 100 marks)

1. Translate the following Kannada paragraph to Malayalam.

ಸಾವಿರದ ಒಂಬೈನೂರ ನಲ್ವತ್ತೈದು ಆಗಸ್ಟ್ ಆರರಂದು ಜಪಾನಿನ ಹಿರೋಶಿಮಾದಲ್ಲಿ ಅಮೇರಿಕವು ಅಣುಬಾಂಬನ್ನು ಸುರಿಸಿತು. ಆಗಸ್ಟ್ ಒಂಭತ್ತರಂದು ನಾಗಸಾಕಿಯಲ್ಲೂ ಆವರ್ತಿಸಿತು. ಎಂಬತ್ತು ಸಾವಿರದಷ್ಟು ಜನರು ಕೂಡಲೇ ಸಾವನ್ನಪ್ಪಿದರು. ಲಕ್ಷಾಂತರ ಮಂದಿ ಅಣುವಿಕಿರಣಕ್ಕೆ ತುತ್ತಾದರು. ಹಿರೋಶಿಮಾ ಹೊತ್ತಿ ಉರಿಯುವಾಗ ಸಡಾಕೋಳಿಗೆ ಎರಡು ವರ್ಷವಾಗಿತ್ತು. ಹತ್ತು ವರ್ಷಗಳ ನಂತರ ಹನ್ನೆರಡನೇ ವಯಸ್ಸಿನಲ್ಲಿ ಅವಳು ರಕ್ತಾರ್ಬುದಕ್ಕೆ ತುತ್ತಾದಳು. ಅಣು ಸ್ಫೋಟನದ ಫಲವಾಗಿ ಉಂಟಾದ ವಿಕಿರಣವು ರೋಗಕ್ಕೆ ಕಾರಣವಾಗಿತ್ತು. ಶಾಲೆಯಲ್ಲಿ ಬುದ್ಧಿವಂತೆಯಾದ ಆ ಓಟಗಾರ್ತಿಗೆ ನಂತರ ಶಾಲೆಗೆ ಹೋಗಲು ಸಾಧಿಯವಾಗಲಿಲ್ಲ. ಚಿಕಿತ್ಸೆಯ ಸಮಯ ಆಸ್ಪತ್ರೆಯಲ್ಲಿರುವಾಗ ಒಬ್ಬಳು ಸ್ನೇಹಿತ ಜಪಾನಿನ ಒಂದು ಊರಿನಲ್ಲಿರುವ ವಿಶ್ವಾಸದ ಕುರಿತು ಹೇಳಿದಳು ಅವರ ವಿಶ್ವಾಸವೇನೆಂದರೆ ಕಾಗದದಿಂದ ಸಾವಿರ ಕೊಕ್ಕರೆಗಳನ್ನು ನಿರ್ಮಿಸಿದರೆ ಯಾವುದೇ ಇಚ್ಛೆ ಸಫಲವಾಗುವುದು ಎಂಬುದಾಗಿತ್ತು. ಬಹಳ ಆಶೆಯಿಂದ ಸಡಾಕೋ ಕೊಕ್ಕರೆಗಳನ್ನು ತಯಾರಿಸಲು ಆರಂಭಿಸಿದಳು ಆದರೆ ಮರಣಕ್ಕೆ ಮುಂಚಿತವಾಗಿ ಆರುನೂರ ನಲ್ವತ್ತನಾಲ್ಕರಷ್ಟು ಮಾತ್ರವೇ ತಯಾರಿಸಲು ಸಾಧ್ಯವಾಯಿತು. ಸಾವಿರದ ಒಂಬೈನೂರ ಐವತ್ತೈದು ಅಕ್ಟೋಬರ್ ಇಪ್ಪತ್ತೈದರಂದು ಸಡಕೋ ಸಾವಿಗೆ ಶರಣಾದಳು.